ಅಧ್ಯಕ್ಷರು: ಪ್ರಸ್ತಾಪ ಏನೆಂದರೆ "2002ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು :ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ (III), (IV) ಮತ್ತು (V))

(iv) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2002 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2002ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು :ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ (III), (IV) ಮತ್ತು (V))

(v) ಕರ್ನಾಟಕ ಪೌರ ಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2002 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2002 ಕರ್ನಾಟಕ ಪೌರಸಬೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, "2002 ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಬೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು :ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ VI)

(3) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಕರ್ನಾಟಕ ಫಲ್ಸ್‌ವುಡ್ ಸಂಸ್ಥೆ ನೌಕರರಿಗೆ ಸೇವಾಭದ್ರತೆ ಒದಗಿಸುವ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಫಲ್ಪ್‌ವುಡ್ ಸಂಸ್ಥೆ 1985ರಲ್ಲಿ ಪ್ರಾರಂಭವಾಯಿತು. ಇದರ ನೌಕರರ ಕರ್ಮ ಕಾಂಡ ಎಷ್ಟರ ಮಟ್ಟಿಗೆ ಬಂದಿದೆ ಅಂದರೆ ಹಲವಾರು ತಿಂಗಳುಗಳಿಂದ ಅವರಿಗೆ ಸಂಬಳ ಇಲ್ಲದೇ ಅವರು ಬೀದಿಪಾಲಾಗುವ ಸಂಗತಿಗಳು ಬಂದಿವೆ. ಇಲ್ಲಿ ಸುಮಾರು 190 ಜನ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಹೆಚ್ಚಿನವರು (ಡಿ) ಗ್ರೂಪ್ ನೌಕರರು. ಸಾಧಾರಣ ಇವರ ವಯೋಮಿತಿ 30 ರಿಂದ 40 ವರ್ಷದೊಳಗಿನವರು. 1991-92 ರಲ್ಲಿ ಕೋರ್ಟ್ ಆದೇಶದ ಪ್ರಕಾರ ಕರ್ನಾಟಕ ಅಭಿವೃದ್ಧಿ ನಿಗಮದೊಂದಿಗೆ ವಿಲೀನಗೊಳಿಸುವಂತೆ ಆಯಿತು. ಆ ವಿಲೀನಕ್ಕೆ ಸಂಬಂಧಪಟ್ಟ ಒಂದು ಆದೇಶವನ್ನೂ ಸಹ ತಾವು ಮಂತ್ರಿಗಳಾಗಿದ್ದಾಗಲೇ ಅದನ್ನು ಮಾಡಿದಿರಿ. ಆದರೆ ದುರ್ದೈವದಿಂದ ಇವರಿಗೆ ಹಲವಾರು ತಿಂಗಳುಗಳಿಂದ ಸಂಬಳ ಸಹ ಕೊಡುತ್ತಿಲ್ಲ. ಫೆಬ್ರವರಿ ನಂತರ ಸುಮಾರು 190 ಜನ ನೌಕರರಿಗೆ ಸಂಬಳ ಕೊಡುತ್ತಿಲ್ಲ. ಅವರ ಕುಟುಂಬಗಳು ಬೀದಿ ಪಾಲಾಗುವ ಸಂದರ್ಭಗಳಾಗಿವೆ. ಅಧಿಕಾರಿಗಳಿಗೆ ಈ ಬಗ್ಗೆ ತಿಳಿಸಿದರೂ ಕೂಡ, ಅವರ ಜೊತೆ ಮಾತುಕತೆ ಮಾಡಿದರೂ ಕೂಡ ಯಾವುದೇ ರೀತಿಯ ಪ್ರಕ್ರಿಯೇ ಆಗಿಲಿಲ್ಲ ಅವರಿಗೂ ಇದುವರೆಗೂ ಸಂಬಳ ಸಹ ಬರಲಿಲ್ಲ. ಕಳೆದ ಅಧಿವೇಶನದಲ್ಲಿ ಈ ಬಗ್ಗೆ ನಮ್ಮ ಉಪಾಧ್ಯಾಯರ ಕೊಠಡಿಯಲ್ಲಿ ಮಾತುಕತೆ ಮಾಡಿ ತಕ್ಷಣ ಸಂಬಳ ಕೊಡುವಂತೆ ಹೇಳಿದೆವು ಅದಕ್ಕೆ ಅವರು ಅಧಿಕಾರಿಗಳು ಒಪ್ಪಿದರು. ಆದರೆ ಫೆಬ್ರವರಿ ನಂತರ ಇವತ್ತಿನವರೆಗೂ ಸಂಬಳ ಇಲ್ಲ. ವಿಶೇಷವೇನೆಂದರೆ 30-40 ವರ್ಷಗಳ ವಯೋಮಿತಿಯಲ್ಲಿರುವವರನ್ನೆಲ್ಲಾ ಸ್ವಯಂ ನಿವೃತ್ತಿ ತೆಗೆದುಕೊಳ್ಳಿ ಎಂದು ಹೇಳುವಂತಹ ಮಾತುಗಳು ಸಹ ಬಂದಿವೆ. ಇವರು ಖಾಯಂ ಆಗಿ ಕೇವಲ 3 ವರ್ಷಮಾತ್ರ ಆಗಿದೆ. ಆ ನಂತರ ಇವರನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ವಿಲೀನಗೊಳಿಸಲಾಯಿತು. ಈಗ ಹೇಳುವಂಥಾದ್ದು ನೀವು ಸ್ವಯಂ ನಿವೃತ್ತಿ ತೆಗೆದುಕೊಳ್ಳಬೇಕು ಎಂದು ಈಗ ನಿವೃತ್ತಿಯಾದವರಿಗೆ ಮುಂದಿನ ಭವಿಷ್ಯ ಕೂಡ ನಿರ್ಮಾಣವಾಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರಿಗೆ 30-40 ಸಾವಿರಕ್ಕೂ ಜಾಸ್ತಿ ಸಿಗುವಂತಹ ಸಂಗತಿಗಳು ಇಲ್ಲ. ನಾನು ಇವತ್ತು ಸರ್ಕಾರವನ್ನು ಆಗ್ರಹ ಮಾಡುವಂತಾದು ಇಷ್ಟೇ ಕರ್ನಾಟಕ ಪಲ್ಪವುಡ್‌ನಲ್ಲಿ 1999ರಿಂದ ಖಾಯಂಗೊಂಡ ಅರಣ್ಯ ನೌಕರರಿಗೆ 3 ವರ್ಷ ಆದ ಕೂಡಲೇ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸುವಂತಾದ್ದು ಸರಿಯೇ? ಇದು ಸರಿಯಲ್ಲ ಈ ಯೋಜನೆಯನ್ನು ಕೈ ಬಿಡಬೇಕು, ಅವರನ್ನು ಅರಣ್ಯ ಅಭಿವೃದ್ಧಿ ನಿಗಮದಲ್ಲಿಯೇ ಖಾಯ ನೌಕರರಾಗಿ ಇಟ್ಟುಕೊಳ್ಳಬೇಕು.

ಎರಡನೆಯದು, ಇದನ್ನು ವಿಲೀನಗೊಳಿಸಲು ಕರ್ನಾಟಕ ಸರ್ಕಾರ ತೀರ್ಮಾನ ಮಾಡಿತ್ತು. ಆ ಆದೇಶವನ್ನೂ ಸರ್ಕಾರ ನಡೆಸಿಕೊಳ್ಳುತ್ತಾ ಇಲ್ಲ. ವಿಲೀನವಾದರೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಲ್ಲೇ ಏಕೆ ಇವರನ್ನು ಖಾಯಂ ಮಾಡಬಾರದು? ಈತನಕ ಅವರಿಗೆ ಖಾಯಂ ಮಾಡತಕ್ಕ ಭರವಸೆಯನ್ನು ಕೊಡುತ್ತಾ ಇಲ್ಲ; ಖಾಯಂ ಮಾಡುತ್ತಲೂ ಇಲ್ಲ ಮತ್ತು ಅವರಿಗೆ ಸವಲತ್ತುಗಳನ್ನೂ ಕೊಡುತ್ತಾ ಇಲ್ಲ. ಇನ್ನೊಂದು, ಸುಮಾರು 6 ತಿಂಗಳು ಇವರಿಗೆ ಸಂಬಳ ಇಲ್ಲ. ಈಗಾಗಲೇ ಅಂಗಡಿಗಳಲ್ಲಿ ಯಾರೂ ಸಾಲ ಕೊಡುವ ಪರಿಸ್ಥಿತಿ ಇಲ್ಲ. ಆ ರೀತಿಯಲ್ಲಿ ಅಷ್ಟು ಸಾಲಗಳು ಆಗಿವೆ. ಏಕೆ ಅದನ್ನು ಕೊಡುತ್ತಾ ಇಲ್ಲ. ಆ ಕಾರಣ, ಇವರಿಗೆ ತಕ್ಷಣ ಸಂಬಳಗಳನ್ನು ಕೊಡಿಸತಕ್ಕ ಕೆಲಸ ಆಗಬೇಕು. ಇವರನ್ನು ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಖಾಯಂಗೊಳಿಸಬೇಕು ಮತ್ತು ಅರರಿಗೆ ಎಲ್ಲಾ ಸವಲತ್ತುಗಳನ್ನು ಕೊಡಬೇಕು. ಏನು ಅವರಿಗೆ ಅವರಿಗೆ ಸ್ವಯಂ ನಿವೃತ್ತಿ

ಯೋಜನೆ ಕೊಟ್ಟು, ನಿವೃತ್ತಿ ಮಾಡಬೇಕೆಂದು ಹೇಳಿದಿರಿ, ಈ ಯೋಜನೆಯನ್ನು ಕೈಬಿಡಬೇಕು. ಏಕೆಂದರೆ, ಅಲ್ಲಿರತಕ್ಕವರೆಲ್ಲರೂ 30 ರಿಂದ 40 ವರ್ಷ ವಯಸ್ಸಿನವರು. ಮುಂದೆ ಕೂಡ ವಿರಗೆ ಭಾರಿ ಭವಿಷ್ಯವಿದೆ. ಅಲ್ಲದೆ, ಅವರಿಗೆ ಈಗ ನಿವೃತ್ತಿಯೋಜನೆಯಿಂದ ಸಿಕ್ಕುವ ಮೊತ್ತ ಕೂಡ ಭಾರಿ ಕಡಿಮೆಯಾದ ಕಾರಣ, ಇದು ಭಾರಿ ದೊಡ್ಡ ಅನ್ಯಾಯ ಮಾಡಿದಹಾಗೆ ಆಗುತ್ತದೆ. ಹೆಚ್ಚಿನವರು " ಸಿ" ಮತ್ತು "ಡಿ' ಗುಂಪಿನ ನೌಕರರು ಆದಕಾರಣ, ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು ಮತ್ತು ಸಂಬಳ ಬಟವಾಡೆಗೆ ತಕ್ಷಣ ಆದೇಶ ಕೊಡಬೇಕು ಎಂದು ಹೇಳುವಂಥ ವಿನಂತಿಯನ್ನು ಕೂಡ ಈ ಮೂಲಕ ಮಾಡಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಅಧ್ಯಕ್ಷರೇ ವಿಶೇಷವಾಗಿ 190 ಕಾರ್ಮಿಕರಲ್ಲಿ ನನ್ನ ತೀರ್ಥಹಳ್ಳಿ ಕ್ಷೇತ್ರದವರೇ ಬಹಳ ಜನ ಇದ್ದಾರೆ. 1985 ರಲ್ಲಿ ಸಾರ್ಕರ ಹುಟ್ಟು ಹಾಕಿರತಕ್ಕಂಥ ಕೆ.ಪಿ.ಎಲ್. ಸಂಸ್ಥೆ ಅಲ್ಲಿ ಯಾವ ಕಾರ್ಮಿಕರು ದುಡಿಯುತ್ತಿದ್ದಾರೆ, ಅವರಲ್ಲ ಇದನ್ನು ಹುಟ್ಟು ಹಾಕಿದ್ದು. ಅವರನ್ನು ಕಾರ್ಮಿಕರಾಗಿ ತೆಗೆದುಕೊಂಡರು. ಸುಮಾರು 17 ವರ್ಷಗಳಿಂದ ಆ ಕಾರ್ಮಿಕರು ಕಾಡುಮೇಡಿನಲ್ಲಿ ಸುತ್ತಿ, ಸಾಗುವಳಿ ಮಾಡಿ ಮರಮುಟ್ಟುಗಳನ್ನು ಬೆಳೆದು ಕೊಟ್ಟಿದ್ದಾರೆ. ಸರ್ಕಾರಕ್ಕೆ ಆದಾಯ ಬಂದಿದೆ. ಆಸ್ತಿಯನ್ನು ರಕ್ಷಣೆ ಮಾಡಿದ್ದಾರೆ. ಒತ್ತುವರಿ ಮಾಡತಕ್ಕಂಥ ಜಾಗಗಳನ್ನೂ ಕೂಡ ಇವರು ರಕ್ಷಣೆ ಮಾಡಿಕೊಂಡು, ರಿಸ್ಕ್ ತೆಗೆದುಕೊಂಡು ಬಂದಿದ್ದಾರೆ. ತಮ್ಮ ಯೌವನಾವಸ್ಥೆಯ ಸುಮಾರು 17 ವರ್ಷಗಳು ಈ ಸಂಸ್ಥೆಯಲ್ಲಿ ನಿಷ್ಟೆಯಿಂದ, ಪ್ರಾಮಾಣಿಕತೆಯಿಂದ ದುಡಿದಿದ್ದಾರೆ. ಇವತ್ತು, ಇವರನ್ನು ಬೀದಿ ಮೇಲೆ ಹಾಕತಕ್ಕ ಪರಿಸ್ಥಿತಿಯಾಗಿದೆ. ಕಳೆದ 6 ತಿಂಗಳಿಂದ, ನಾನು ಶ್ರೀ ಸದಾನಂದಗೌಡರು ಮತ್ತು ಬೇರೆ ಬೇರೆ ಶಾಸಕರು ಹಾಗೂ ಡೆಪ್ಯೂಟಿ ಸ್ಪೀಕರ್ - ನಾವೆಲ್ಲರೂ ಒತ್ತಡ ಹಾಕುತ್ತೇವೆ. ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರ ಕ್ಷೇತ್ರದ ಅನೇಕ ಕಾರ್ಮಿಕರೂ ಇದ್ದಾರೆ. ಅವರಿಗೆ ಸಂಬಳ ಕೊಡುತ್ತೇವೆಂದು ಹೇಳುತ್ತಾರೆ, ಆದರೆ ಕೊಡುವುದಿಲ್ಲ. ಕೆ.ಪಿ.ಎಲ್ ಅನ್ನು ಕೆಪಿಸಿ ಜೊತೆಗೆ ಮರ್ಜ್ ಆಗಬೇಕೆಂಬ ಆದೇಶ ಬಂದರೂ ಕೂಡ ಕಳೆದ 10 ವರ್ಷಗಳಿಂದ ಮರ್ಜ್ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಯಾರೋ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಇವತ್ತಿಗೂ ಕೂಡ ಮರ್ಜ್ ಆಗಲಿಲ್ಲ. ಇದರ ಪರಿಣಾಮ ಕೆ ಎಪ್ ಡಿ ಸಿ ನೌಕರರಿಗೆ ಇವತ್ತು ಸಂಬಳ ಬರುತ್ತಾ ಇದೆ, ಅದೇ ಸಂಸ್ಥೆಯಲ್ಲಿ ಅವರ ಜೊತೆಯಲ್ಲೇ ದುಡಿಯುತಕ್ಕ ಇವರಿಗೆ ಇವತ್ತು 6 ತಿಂಗಳಿಂದ ಕೆಲಸ ಇಲ್ಲ. ಒಂದು ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕ ನೌಕರರಿಗೆ 6 ತಿಂಗಳಿಂದ ಸಂಬಳ ಕೊಡುವುದಿಲ್ಲವೆಂದು ಹೇಳಿದರೆ, ಇದು ಸರ್ಕಾರಕ್ಕೆ ಅವಮಾನವಾಗತಕ್ಕ ಸಂಗತಿ. ನಾವೆಲ್ಲರೂ ತಲೆತಗ್ಗಿಸತಕ್ಕಂಥ ಸಂಗತಿ ಇದರಲ್ಲಿ 5-6 ಜನ ಕಾರ್ಮಿಕರು ಸತ್ತುಹೋದರು. ಅವರ ಹೆಂಡತಿ ಮಕ್ಕಳು ಇವತ್ತು ಬೀದಿಮೇಲೆ ಇದ್ದಾರೆ. ಅವರ ಜೀವನಕ್ಕೆ ಕೆಲಸವೂ ಇಲ್ಲ, ಅವರಿಗೆ ಸಂಬಳ ಇಲ್ಲ. ಅವರ ಬೆನಿಫಿಟ್‌ಗಳನ್ನೂ ಸರ್ಕಾರ ಕೊಡುತ್ತಾ ಇಲ್ಲ. ಇಂತಹ ದಯನಿಯವಾಗಿರತಕ್ಕಂಥ ಈ ಸಂಸ್ಥೆಯ ನೌಕರರಿಗೆ ಶಿವಮೊಗ್ಗದಲ್ಲಿ 18 ಲಕ್ಷದ 70 ಸಾವಿರ, ಚಿಕ್ಕಮಂಗಳೂರಿನಲ್ಲಿ 2 ಲಕ್ಷದ 58 ಸಾವಿರ, ಧಾರವಾಡದಲ್ಲಿ 8 ಲಕ್ಷದ 1 ಸಾವಿರ, ಬೆಂಗಳೂರಿನಲ್ಲಿ 90 ಸಾವಿರ, ಕೇಂದ್ರ ಕಛೇರಿಯಲ್ಲಿ 47 ಸಾವಿರ ಹೀಗೆ ಒಟ್ಟು 30 ಲಕ್ಷದ 70 ಸಾವಿರ ರೂಪಾಯಿ ಸಂಬಳ ಬಟವಾಡೆ ಆಗಬೇಕಾಗಿದೆ. ಮಾನ್ಯ ಹಿರಿಯರಾಗಿರತಕ್ಕಂಥ ಶ್ರೀ ರಂಗನಾಥ್‌ರವರು

ಸಚಿವರಾಗಿದ್ದಾರೆ. ಸಮಾಜವಾದಿ ಆಲೋಚನೆಯಲ್ಲಿ ಮತ್ತು ಆ ಹಿನ್ನೆಲೆಯಲ್ಲಿ ಬಂದಿರತಕ್ಕವರು. ಅಂತಹ ವ್ಯಕ್ತಿತ್ವ ಅವರದ್ದು, ನಮಗೆಲ್ಲರಿಗೂ ಅವರ ಮೇಲೆ ಗೌರವ ಇದೆ. ಅಲ್ಲಿರತಕ್ಕ ಕಾರ್ಮಿಕರೆಲ್ಲರೂ ಅವರ ಮಕ್ಕಳಿಗೆ ಸಮಾನ ಇಂತಹ ಒಂದು ಪರಿಸ್ಥಿತಿಯಲ್ಲಿ, ನಿಮ್ಮ ಕಾಲದಲ್ಲಿ ಅವರೇಕೆ ಕಣ್ಣೀರು ಹಾಕಬೇಕು. ನಿಮ್ಮ ಕಾಲದಲ್ಲಿ ಅನ್ನವಿಲ್ಲದೆ ಬೀದಿ ಮೇಲೆ ಅಲೆಯಬಾರದು. ರಂಗನಾಥ್‌ರವರು ಅರಣ್ಯ ಸಚಿವರಾಗಿದ್ದಾಗ ಈ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಕೆಲವರಿಗೆ ಬಂದಿದೆಯೆಂದರೆ ಯಾರೂ ನಂಬುವುದಿಲ್ಲ. ಏಕೆಂದರೆ, ಆ ಒಂದು ಪರಿಸ್ಥಿತಿಯಿಂದ, ಆ ಒಂದು ಮಟ್ಟದಿಂದ ಬಂದಿರತಕ್ಕ ತಾವು ಉದಾರವಾಗಿರತಕ್ಕ ಮನಸ್ಸು ಮಾಡಬೇಕು. ಅಧಿಕಾರಿಗಳೇನೂ ರಿಸ್ಕ್ ತೆಗೆದುಕೊಳ್ಳುವುದಿಲ್ಲ ಬಿಡಿ ಅವರು ಕುದುರೆ ಮುಖವಾಡ ಹಾಕಿದ ಹಾಗೆ ಇದ್ದಾರೆ. ಅವರಿಗೆ ಏನಾಗಿದೆಯೋ ಗೊತ್ತಿಲ್ಲ. ಅವರಿಗೆ ಸಂಬಳ ಬರದೇ ಇದ್ದರ ಮಾತ್ರ ಗೊತ್ತಾಗುತ್ತೆ. ಇವತ್ತು ಇವರಿಗೆ ಬೇರೆ ಪ್ರಾಜೆಕ್ಟ್‌ಗಳಲ್ಲಿ ಕೊಡಬಹುದು. ಇವರ ಆಸ್ತಿ ಸುಮಾರು 70 ಸಾವಿರ ಹೆಕ್ಟೇರ್ ಜಮೀನು ಇದೆ. ಬೇರೆ ಬೇರೆ ಪ್ರಾಜೆಕ್ಟ್‌ಗಳನ್ನು ಮಾಡಿ ಅವರನ್ನು ದುಡಿಸಿಕೊಳ್ಳಬಹುದು. ಆ ಆಸ್ತಿಯಿಂದ ಸಾಕಷ್ಟು ರಾ ಮೆಟೀರಿಯಲ್ಸ್ ಕೂಡ ಮಾಡಬಹುದು. ಅರಣ್ಯವನ್ನು ಬೆಳೆಸಬಹುದು. ಅರಣ್ಯದಲ್ಲೇ ಇರತಕ್ಕ ಬೇರೆ ಬೇರೆ ಭಾಗಗಳಿಗೆ ಇವರನ್ನು ಹಂಚಿಹಾಕಿ, ಅವರಿಗೆ ಕೆಲಸವನ್ನು ಮುಂದುವರಿಸಿ ಇವರೆಲ್ಲರೂ ಇತ್ತೀಚೆಗೆ ಅಂದರೆ 3 ವರ್ಷಗಳ ಹಿಂದೆ ಖಾಯಂ ಆಗಿರತಕ್ಕಂಥವರು ಇವತ್ತು ಅವರನ್ನು ಬೀದಿ ಮೇಲೆ ಹಾಕಿ ಸ್ವಯಂ ನಿವೃತ್ತಿ ತೆಗೆದುಕೊಳ್ಳಿ ಎಂದು ಹೇಳಿದರೆ, 1 ಲಕ್ಷ 50 ಸಾವಿರ ನೀವು ಕೊಡಬಹುದು. ಅವರು ಬದುಕುವುದಕ್ಕಾಗುತ್ತದೆಯೇ? ಅದಕ್ಕಾಗಿ, ಇದನ್ನು ಸರ್ಕಾರ ಉದಾರ ಮನಸ್ಸಿನಿಂದ ನೋಡಬೇಕು. ಅವರನ್ನು ಖಾಯಂ ಮಾಡುವ ಹಾಗೆ ಮಾಡಬೇಕು. ಬಾಕಿ ಇರತಕ್ಕ ಸಂಬಳವನ್ನು ತತ್‌ಕ್ಷಣ ಅವರಿಗೆ ಬಟವಾಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) : ನಾನು ಎಷ್ಟೇ ಉದಾರ ಮನಸ್ಸಿನಿಂದ ಸಹಾಯ ಮಾಡಬೇಕೆಂದು ಮನಸ್ಸು ಮಾಡಿದರೂ ಕೂಡ, ಸಹಾಯ ಮಾಡದೇ ಇರತಕ್ಕ ಸಂಸ್ಥೆ ಇದು ಸಂಬಳ ಕೊಡುವುದಕ್ಕೆ ಆಗುವುದೇ ಇಲ್ಲ. ಇವರಿಗೆ ವಿ. ಆರ್.ಎಸ್. ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವರಿಗೆ ಯಾವ ಸಂಬಳವೂ ಇಲ್ಲ. ಈ ಕಂಪನಿ ಅಸ್ತಿತ್ವದಲ್ಲಿ ಇಲ್ಲ. ಪಲ್ಪ್ ವುಡ್ ಕಂಪನಿ ಎಂಬುದು ಅಸ್ತಿತ್ವದಲ್ಲಿ ಇಲ್ಲ. ಹಾಗಾಗಿ, ನಾನು ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಈ ವಿಷಯವನ್ನು ಸದನದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇಂತಹ ಒಂದು ಅವ್ಯವಸ್ಥೆಯಿಂದ ನಡೆದಂಥ ಸಂಸ್ಥೆ ಕರ್ನಾಟಕದಲ್ಲಿ ಇರಲಿಲ್ಲವೆಂಬುದು ನನ್ನ ಅಭಿಪ್ರಾಯ. ಈ ಪಲ್ಪ್ ವುಡ್ ಸಂಸ್ಥೆ ಕೆ ಎಸ್ ಎಫ್ ಐ ಸಿ ಒಂದು ಸಂಸ್ಥೆಯಾಗಿ ಸ್ಥಾಪನೆಯಾಗಿದೆ. ಅದು ಹೇಗಾಯಿತು, ಹೇಗೆ ನಡೆದುಕೊಂಡು ಬಂದಿತೋ ಆ ಮಾತು ಬೇರೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ಇದು ಮಾಡಿದಂಥ ಸಾಲ 25 ಕೋಟಿ ರೂಪಾಯಿ. ಇದರಲ್ಲಿ ಏನೂ ಇರಲಿಲ್ಲ, ಬಂಡವಾಳವಿಲ್ಲದ್ದು, ಸಣ್ಣದು. ಸುಮಾರು ಒನ್ ಟೈಮ್ ಸೆಟಲ್‌ಮೆಂಟ್ ಎಂದು 12 ಕೋಟಿ ರೂಪಾಯಿಗಳನ್ನು ಸರ್ಕಾರ ಕ್ಯಾಬಿನೆಟ್ ತೀರ್ಮಾನ ಮಾಡಿ ಕೊಟ್ಟಿತು. ಇಂತಹ ಕೆಟ್ಟ ಸಂಸ್ಥೆಯನ್ನು ಯಾರು ನಡೆಸಿಕೊಂಡು ಬಂದಿದ್ದರೋ, ಯಾವ ಅಧಿಕಾರಿಗಳು ನಡೆಸಿದರೋ, ಇದನ್ನು ಏನು ಮಾಡಿದರೋ, ಅವರಿಗೆ ಏನು ಶಿಕ್ಷೆ

ಮಾಡಬೇಕಾಗುತ್ತದೆ ಎಂಬುದನ್ನು ಈ ಸದನವೇ ತೀರ್ಮಾನ ಮಾಡಬೇಕು. ಇಂತಹ ಪರಿಸ್ಥಿತಿ ಅಲ್ಲಿದೆ. ಇದಕ್ಕೆ ಹರಿಹರ ಪಾಲಿ ಫೈಬರ್‌ನವರು ಬಂದು 60 ಲಕ್ಷ ರೂಪಾಯಿ ಷೇರು ಹಾಕಿ, ಹೆಚ್ಚು ಬಂಡವಾಳವಿಲ್ಲದಿರತಕ್ಕ ಕಂಪನಿಗೆ ಆಡಳಿತ ಮಾಡತಕ್ಕ ಅಧಿಕಾರವನ್ನು ಅವರಿಗೇ ಕೊಟ್ಟು, ಈ ಅತಂತ್ರವಾಗಿದೆ. 12 ಕೋಟಿ ರೂಪಾಯಿಗಳನ್ನು ಕೊಡತಕ್ಕ ಪರಿಸ್ಥಿತಿ ಬಂದಾಗ ನಾನು ಒಪ್ಪಲಿಲ್ಲ. ಯಾವ ಯಾವ ಅಧಿಕಾರಿಗಳು ಅದನ್ನು ಈ ಪರಿಸ್ಥಿತಿಗೆ ತಂದರು, ಅವರ ಮೇಲೆ ವಿಚಾರಣೆ ಮಾಡಬೇಕೆಂದು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ, ಬಹಳ ಮಟ್ಟಿಗೆ ಅದು ನಡೆಯುತ್ತದೆ. ಇಂತಹ ಪರಿಸ್ಥಿತಿ ಇರುವಾಗ ನಾವು ಎಲ್ಲಿಂದ ಕೊಡಬೇಕು? It is not in existence. ಹಿಂದೆ ಕ್ಯಾಬಿನೇಟ್ ತೀರ್ಮಾನವಾಗಿದೆ. ಹೈಕೋರ್ಟಿಗೆ ನಾವು ಅರ್ಜಿ ಕೊಟ್ಟು ಇದನ್ನು ಲಿಕ್ವಿಡೇಟ್ ಮಾಡಿಸಬೇಕಾಗಿತ್ತು, ಅದನ್ನು ಮಾಡಿಲ್ಲ. ಅದೇ ಉಳಿದುಕೊಂಡು ಬಂದಿದೆ. ಸಂಬಳ ಕೊಡು, ಕೊಡು ಎಂದರೆ ನಾನು ಎಲ್ಲಿಂದ ಕೊಡಬೇಕು? ಅವರ ಗೋಳನ್ನು ನೋಡಿ ಮಾನ್ಯಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ, ವಸ್ತುಸ್ಥಿತಿ ಏನಿದೆ ಅದನ್ನು ನಾವು ಗಮನಿಸಬೇಕಾಗುತ್ತದೆ. ಸಂಸ್ಥೆಯೇ ಇಲ್ಲವೆನ್ನುವಾಗ ಹೇಗೆ ಕೊಡುವುದು? ಯಾರು ನಡೆಸುತ್ತಿದ್ದಾರೆ? ಕೆ ಎಸ್ ಎಫ್ ಐ ಸಿ ಕೂಡ ಸರಿಯಾಗಿಲ್ಲ, ಮಾನ್ಯ ತೀರ್ಥಹಳ್ಳಿ ಸದಸ್ಯರಾದ ಅರಗ ಜ್ಞಾನೇಂದ್ರ ಅವರಿಗೆ ಗೊತ್ತಿದೆ. ಈಗೀಗ ಏನೋ ಮಾಡಿ ಸ್ವಲ್ಪ ಮೇಲಕ್ಕೆ ಬರುವುದಕ್ಕೆ ನಾವು ಸಹಾಯ ಮಾಡುತ್ತಿದ್ದೇವೆ. ಅರಣ್ಯದಿಂದ ಅವರಿಗೆ ಮರ ಕೊಟ್ಟು, ಅದು ಕೆಲಸ ಮಾಡುವ ಹಾಗೆ ಮಾಡಿ, ಸಂಬಳ ಕೊಡತಕ್ಕ ರೀತಿಯಲ್ಲಿ ಮಾಡಿ, ಸ್ವಲ್ಪ ಲಾಭ ಬರತಕ್ಕ ದಿಕ್ಕಿನಲ್ಲಿ ಮಾಡುತ್ತಾ ಇದ್ದೇವೆ. ಹೀಗಿರುವಾಗ ಈ ಸಂಸ್ಥೆಯನ್ನು ಮತ್ತೆ ಇದಕ್ಕೆ ಮರ್ಜ್ ಮಾಡುವುದು ಹೇಗೆ? ಕೆ ಎಸ್ ಎಫ್ ಐ ಸಿ ನಲ್ಲಿ ವಿಲೀನಗೊಳಿಸಿ ಎಂದು ಮಾನ್ಯ ಜ್ಞಾನೇಂದ್ರರವರು ಹೇಳಿದರು, ಮಾನ್ಯ ಸದಾನಂದಗೌಡರೂ ಕೂಡ ಹೇಳಿದರು. ಆದರೆ, ಹೇಗೆ ವಿಲೀನಗೊಳಿಸುವುದು? It is not in existence. Pulpwood Company in not in existence ನಾನು ಯಾವ ತರಹ ಮಾಡಲಿಕ್ಕೆ ಸಾಧ್ಯವಾಗುತ್ತದೆ? ಬಡ್ಡಿ 25 ಕೋಟಿ ರೂಪಾಯಿಗಳನ್ನು ಮಾಡಿಕೊಂಡು ಕುಳಿತಿರಬೇಕಾದರೆ ಈ ಅಧಿಕಾರಿಗಳು ಏನು ಮಾಡುತ್ತಾ ಇದ್ದರು? ಒನ್ ಟೈಮ್ ಸೆಟಲ್‌ಮೆಂಟ್ ಎಂದು 12 ಕೋಟಿ ರೂಪಾಯಿಗಳನ್ನು ಕೊಡತಕ್ಕ ಪರಿಸ್ಥಿತಿಗೆ ನಾವು ಒಳಗಾಗಿದ್ದೇವೆ. ಇಲ್ಲಿ ಚಿಕ್ಕ ವಯಸ್ಸಿನವರು ಇರಬಹುದು. ಇಂತಹ ಸಂಸ್ಥೆಗಳ ಬಗ್ಗೆ ಸದನ ಗಮನ ಹರಿಸದೇ ಹೋದರೆ ಸರ್ಕಾರ ದಿವಾಳಿಯಾಗುತ್ತದೆ. ದಿವಾಳಿಯಾಗತಕ್ಕ ಪರಿಸ್ಥಿತಿಗೆ ತಂದು ನಿಲ್ಲಿಸುತ್ತಾರೆ. ಇದರಲ್ಲಿ ಉದಾರ ಮನಸ್ಸಿನ ಪ್ರಶ್ನೆ ಇಲ್ಲ. ಮಾನ್ಯ ಅಧ್ಯಕ್ಷರೇ, ಮೈನಾರಿಟಿ ಷೇರು ಇರತಕ್ಕ ಕಂಪನಿಗೆ ಆಡಳಿತ ಮಾಡತಕ್ಕ ಅಧಿಕಾರವೆನ್ನು ಯಾರಾದರೂ ಕೊಡುತ್ತಾರೆಯೇ? ಇದಕ್ಕೆ ಯಾರು ಕೊಟ್ಟಿದ್ದರು, ಯಾರು ಒಪ್ಪಿಕೊಂಡರು, ಇದೆಲ್ಲಾ ಆಗಬೇಕು. ಇದೆಲ್ಲಾ ಆಗುವಂತಾದ್ದಲ್ಲ. ಮಾನ್ಯ ಸದಸ್ಯರು ಎಷ್ಟೇ ಒತ್ತಾಯ ಮಾಡಿದರೂ ಕೂಡ ನಾನು ಮಾತ್ರ ಇದಕ್ಕೆ ಭಾಗಿಯಾಗಲಾರೆ. ನೀವು ಏನೇ ಗಲಾಟೆ ಮಾಡಿದರೂ, ಇಡೀ ಸದನವೇ ಗಲಾಟೆ ಮಾಡಿದರೂ ನಾನು ಮಾತ್ರ ಇದಕ್ಕೆ ಭಾಗಿಯಾಗಲಾರೆ.

ಶ್ರೀ ಅರಗಜ್ಞಾನೇಂದ್ರ:– ಹಿಂದಿನ ಸರಕಾರ ಮಾಡಿದೆ. ಈ ಸರಕಾರ ಏನೂ ಮಾಡಲು ಬರುವುದಿಲ್ಲವೆಂದರೆ ಏನರ್ಥ?

ಶ್ರೀ ಕೆ.ಹೆಚ್. ರಂಗನಾಥ್: ನಾನು ಇಂಥ ತಪ್ಪು ಮಾಡುವುದಕ್ಕೆ ಭಾಗಿಯಾಗಲಾರೆ. ಅದನ್ನು ನಾನು ಮಾಡುವುದಿಲ್ಲ. ಇಷ್ಟನ್ನು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ತಮ್ಮ ಒಂದು ಕಾರ್ಯಶೈಲಿ, ತಮ್ಮ ವಾಸ್ತವ ಸ್ಥಿತಿಗಳನ್ನು ನಾನೂ ಕೂಡ ಅರ್ಥ ಮಾಡಿಕೊಂಡಿದ್ದೇನೆ. ಆದರೆ ಈ 190 ಜನರು ಸರಕಾರಿ ನೌಕರರಾಗಿ.

ಶ್ರೀ ಹೆಚ್. ರಂಗನಾಥ್: ಅವರು ಒಂದು ಇಂಡಸ್ಟ್ರೀಯ ನೌಕರರು ಆಗಿದ್ದರು.

ಶ್ರೀ ಡಿ.ಪಿ. ಸದಾನಂದಗೌಡ: ಅದನ್ನು ನಾನು ಒಪ್ಪುತ್ತೇನೆ. ಆದರೆ ಆ 190 ಜನರನ್ನು ಕಳೆದ 17 ವರ್ಷಗಳಿಂದ ಸರಕಾರದ ಅಂಗ ಸಂಸ್ಥೆಯು ದುಡಿಸಿಕೊಂಡಿದೆಯಲ್ಲಾ ಅಧ್ಯಕ್ಷರೇ? ಮೊನ್ನೆ ಮಾತುಕತೆ ಮಾಡಿದಾಗಲೂ ಕೂಡ ಅಲ್ಲಿನ ಅಧಿಕಾರಿಗಳು ಏನು ಹೇಳಿದರು?...

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಮೈನಾರಿಟಿ ಷೇರ್ ಹೋಲ್ಡರ್ಸ್ ಇರತಕ್ಕಂಥಾದರೆ ಆಡಳಿತ ನಡೆಸಲು ಅವಕಾಶ ಕೊಟ್ಟಿದ್ದು ಅಲ್ಲಿದೆ, ಆ ಷೇರ್‌ಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕೂ ಕೂಡ ಅವಕಾಶ ಕೊಟ್ಟಿದ್ದಾರೆ. can this happen?

ಶ್ರೀ ಡಿ.ವಿ. ಸದಾನಂದಗೌಡ: ಹಿಂದಿನ ಯಾವುದೋ ಸರಕಾರ, ಯಾರೋ ಅಧಿಕಾರಿ ಮಾಡಿದ ತಪ್ಪಿಗೆ ಈ 190 ಜನರನ್ನು ಬಲಿಪಶುವನ್ನಾಗಿ ಮಾಡುವುದು ಸರಿಯೇ?

ಶ್ರೀ ಕೆ.ಹೆಚ್. ರಂಗನಾಥ್: ತಾವು ಸ್ವಲ್ಪ ಯೋಚನೆ ಮಾಡಿ. ಈ ರಾಜ್ಯ ನಿಮ್ಮದು. ಈ ಸರಕಾರಗಳು ನಿಮ್ಮದು, ಪಕ್ಷಗಳು ಮಾತ್ರ ಬದಲಾವಣೆಯಾಗುತ್ತವಷ್ಟೆ...

ಶ್ರೀ ಡಿ.ವಿ. ಸದಾನಂದಗೌಡ: ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಅಲ್ಲಗಳೆಯುವುದಿಲ್ಲ. ಆದರೆ ಈ 190ಜನರ ಪರಿಸ್ಥಿತಿ ಏನಾಗುತ್ತದೆ? ಅವರೇನು ಮಾಡಬೇಕು? ನೇಣು ಹಾಕಿಕೊಳ್ಳಬೇಕೇ? ಆತ್ಮಹತ್ಯೆ ಮಾಡಿಕೊಳ್ಳಬೇಕೇ? ಇದನ್ನೂ ಕೂಡ ಹೇಳಿ ಬೇಕಲ್ಲವೇ? ಅಧಿಕಾರಿಗಳು ಏನು ಮಾಡಿದ್ದಾರೆ? ಇದಕ್ಕೆ ಉತ್ತರ ಹೇಳಬೇಕಲ್ಲವೇ?

ಶ್ರೀ ಕೆ.ಹೆಚ್. ರಂಗನಾಥ್: ಅದಕ್ಕೆ ನಾನೇಕೆ ಉತ್ತರ ಹೇಳಲಿ? ನಾನು ಹೇಳುವುದೇ ಇಲ್ಲ....

ಶ್ರೀ ಡಿ. ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರವೃತ್ತಿ ಸರಿಯಲ್ಲ. ಇವರಿಗೆ ಏನಾದರೂ ಬದಲಿ ವ್ಯವಸ್ಥೆಯನ್ನು ಮಾಡಬೇಕು. ಅದು ಸರಕಾರದ ಜವಾಬ್ದಾರಿ ಕೂಡ ಆಗಿದೆ.

ಅಧ್ಯಕ್ಷರು: ಅಸ್ತಿತ್ವದಲ್ಲಿಯೇ ಇರದಿರುವಂಥ ಕಂಪನಿಯ ಬಗ್ಗೆ ಅವರು ಏನು ಹೇಳಲು ಸಾಧ್ಯ?

ಶ್ರೀ ಆರಗ ಜ್ಞಾನೇಂದ್ರ : ಅಸ್ತಿತ್ವದಲ್ಲಿಯೇ ಇಲ್ಲವೆಂದು ಅವರು ಹೇಳುವುದಕ್ಕೆ ಆಗುವುದಿಲ್ಲ. ಹಾಗೆ ಅವರು ಉತ್ತರಿಸುವುದು ಸರಿಯಲ್ಲ. ಹಿರಿಯ ಸಚಿವರು ಹಾಗೆ ಹೇಳಿದರೆ ಹೇಗೆ?

ಶ್ರೀ ಹೆಚ್. ರಂಗನಾಥ್: ಮಾನ್ಯ ಸದಸ್ಯರು ಸದನದ ಕಾನೂನು ಪ್ರಕಾರ ಇದನ್ನು ಚರ್ಚೆಮಾಡಲು ಇನ್ನೊಂದು ಪ್ರತ್ಯೇಕ ಅವಕಾಶವನ್ನು ಮಾಡಿಕೊಡಲಿ. ತಾವು ಅವಕಾಶ ಮಾಡಿಕೊಟ್ಟ ಮೇಲೆ ಸ್ಪಷ್ಟವಾಗಿ ಇರುವುದನ್ನು ಈ ಸದನದ ಮುಂದೆ ಇಡುತ್ತೇನೆ.

ಅಧ್ಯಕ್ಷರು: ಅವರು ಉತ್ತರವನ್ನು ಹೇಳಿದ್ದಾರೆ. ಸಫಿಶಿಯಂಟ್ ಆಗಿ ಉತ್ತರವನ್ನು ಹೇಳಿದ್ದಾರೆ. ತಮಗೂ ಅದಕ್ಕೂ ಸಂಬಂಧವಿಲ್ಲ...

ಶ್ರೀ ಅರಗಜ್ಞಾನೇಂದ್ರ: ಅದು ಹೇಗಾಗುತ್ತದೆ. ನಿನ್ನೆ ಮೊನ್ನೆಯಲ್ಲಾ ಸಿಬ್ಬಂದಿಗೆ ಸಂಬಳ ಕೊಟ್ಟಿದ್ದಾರೆ. ಅಸ್ತಿತ್ವದಲ್ಲಿಯೇ ಇಲ್ಲವೆಂದು ಆಗುತ್ತದೆಯೇ? ಹಾಗಾದರೆ ಸಂಬಳ ಕೊಡಲು ಬರುತ್ತದೆಯೇ? ಮಾನ್ಯ ಹಿರಿಯ ಸಚಿವರು ಹೀಗೆ ಹೇಳಬಹುದೇ?

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಇದಕ್ಕಿಂತಲೂ ಜೋರಾಗಿ ಗಲಾಟೆ ಮಾಡಲು ನನಗೆ ಬರುತ್ತದೆ. ಅವರಿಗೆ ತೊಂದರೆಯಾಗಬಾರದು ಎಂದು ಏನೋ ಸಹಾಯ ಮಾಡಿಕೊಂಡು ಬಂದರೆ ಅದನ್ನೇ ಹಿಡಿದುಕೊಂಡು ಕುಳಿತುಕೊಂಡರೆ?

ಶ್ರೀ ಅರಗಜ್ಞಾನೇಂದ್ರ : ಅವರಿಗೆ ಸುಮ್ಮನೆ ಸಂಬಳ ಕೊಟ್ಟಿಲ್ಲ, ಅವರು ದುಡಿದಿದ್ದಾರೆ ನೀವು ಸಂಬಳ ಕೊಟ್ಟಿದ್ದೀರಿ. ಈಗಲೂ ಕೂಡ ದುಡಿಯುತ್ತಿದ್ದಾರೆ. ಸರಕಾರಿ ಆದೇಶವಾಗಿ 1994ರಲ್ಲಿ ಅದನ್ನು ಮರ್ಜ್ ಮಾಡಬೇಕೆಂದು ಆಗಿದೆ.

ಅಧ್ಯಕ್ಷರು: ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್‌ಗಳನ್ನು ಕೊಡಿ. ಮುಂದಿನ ಪ್ರಸ್ತಾವನೆ ಸಿಂಧ್ಯರವರು ಮಾಡಿ. ಶ್ರೀ ರಾಮದಾಸ್‌ರವರು ತಮ್ಮ ವಿಷಯ ಪ್ರಸ್ತಾಪಿಸಿ

ಶ್ರೀ ಅರಗಜ್ಞಾನೇಂದ್ರ: ಈ 190 ಕುಟುಂಬಗಳಿಗೆ ಒಂದು ಪುನರ್ ವಸತಿಯನ್ನು ಕಲ್ಪಿಸಬೇಕು. ಅವರುಗಳನ್ನು ಪರ್ಮನೆಂಟ್ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೂ ಮಾನ್ಯ ಸಚಿವರ ಹೇಳಿಕೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. (ಈ ಹಂತದಲ್ಲಿ ಸನ್ಮಾನ್ಯ ಬಿ.ಜೆ.ಪಿ. ಪಕ್ಷದ ಸದಸ್ಯರುಗಳಾದ ಶ್ರೀ ಅರಗಜ್ಞಾನೇಂದ್ರರವರು ಮತ್ತು ಶ್ರೀ ಡಿ.ವಿ. ಸದಾನಂದಗೌಡರವರು ಸಭಾತ್ಯಾಗ ಮಾಡಿದರು)

ಶ್ರೀ ಎ. ರಾಮದಾಸ್: ಸನ್ಮಾನ್ಯ ಅಧ್ಯಕ್ಷರೇ, ಮೈಸೂರು....

ಶ್ರೀ ಕೆ.ಹೆಚ್. ರಂಗನಾಥ್: ಇಂಥ ಜನರಿಗೆ ನಾವು ಕೈಮುಗಿಯಬೇಕು ಅಷ್ಟೆ.... ಕೋಪ ಮಾಡಿಕೊಳ್ಳುವುದಲ್ಲ. ಇಂಥಾದ್ದು ಸರಕಾರದಲ್ಲಿ ಇರುವುದಕ್ಕೆ ಸಾಧ್ಯವೇ? can we have these things can we been such instances. ಈ ಸಭೆ ಸದನ ಹೇಳಲಿ... ಅಲ್ಲಿ ಸುಮಾರು 25 ಕೋಟಿ ರೂಪಾಯಿಗಳ ನಷ್ಟ ಇದೆ. subject to carrection ಅಷ್ಟು ಬಡ್ಡಿ ಏರಿದ್ದನ್ನು ಒನ್‌ಟೈಂ ಸೆಟಲ್‌ಮೆಂಟ್ ಎಂದು 12 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ಪರಿಸ್ಥಿತಿಗೆ ತಂದಂಥ ಕಂಪನಿ ಬಗ್ಗೆ ಮಾತನಾಡಿದರೆ ಹೇಗೆ? ಇವರು ಮತ್ತೆ ಏನು ಮಾಡಿದರು? ಏಕೆ ನಷ್ಟವಾಯಿತು? ಕ್ಯಾಬಿನೆಟ್ ಡಿಸಿಶನ್ ಇದೆ ಲಿಕ್ವಿಡೇಟ್ ಮಾಡಬೇಕು ಎಂದು.... ಎಲ್ಲಾ ವಿವರಗಳನ್ನು ನಾನು ಇಡುತ್ತೇನೆ. I will place all the recerds before the House ಈ ಸದನದ ಮುಖಾಂತರ ರಾಜ್ಯದ ಜನತೆಯ ಮುಂದಿಡುತ್ತೇನೆ. ರಾಜ್ಯದ ಜನತೆಯು ಒಪ್ಪಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಮಾನವೀಯತೆಯ ಆಧಾರದ ಮೇಲೆ 190 ಜನರಿಗೆ ಸಾಮಾಜಿಕ ಬದ್ಧತೆಯನ್ನು ಸರಕಾರದವರು ಕೊಡಬೇಕೆಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಸರಕಾರ ಅದನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಂಡು ಈ ರೀತಿ ಹೇಳ ಬಾರದು. ಸಿಬ್ಬಂದಿಯ ಜೀವನಕ್ಕೆ ಮಾನವೀಯತೆಯ ಆಧಾರದ ಮೇಲೆ ಭದ್ರತೆ ಕೊಡಿ...

ಶ್ರೀ ಕೆ.ಹೆಚ್. ರಂಗನಾಥ್ : ಹಾಗಾದರೆ ನನಗೂ ಒಂದು ಹತ್ತಿಪ್ಪತ್ತು ಲಕ್ಷ ರೂಪಾಯಿ ಬೇಕು. ಕೊಡಿ ಸ್ವಾಮಿ... ಕೊಡ್ತೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೊಡೋದಿದ್ದರೆ ಕೊಡಿಸೋಣ....

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಹೆಚ್. ರಂಗನಾಥ್: ತಮಿಳಿನಲ್ಲಿ ಒಂದು ಗಾದೆ ಮಾತಿದೆ ಪುಳ್ಳಕ್ಕೋರು ರಾಮಕೃಷ್ಣ ಎಂದು ಹಾಗಾಗಿದೆ ನಮ್ಮ ಲೆಕ್ಕಾಚಾರ

ವಿಷಯ: ಮೈಸೂರಿನ ತಗಡೂರು ರಾಮಚಂದ್ರರಾಯರ ವೃತ್ತದ ಬಳಿ ಬಾರ್ ಅಂಡ್ ರೆಸ್ಟೋರೆಂಟ್ ಪ್ರಾರಂಭಿಸಿರುವ ಬಗ್ಗೆ

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೇ, ಮೈಸೂರು ಮಹಾನಗರದಲ್ಲಿ ಚಾಮುಂಡಿಪುರಂ ನಲ್ಲಿರುವ ತಗಡೂರು ರಾಮಚಂದ್ರರಾಯರ ವೃತ್ತದಲ್ಲಿ ಜೂನ್ 8ನೇ ತಾರೀಖು ಬೇರೆ ಕಡೆಯಲ್ಲಿದ್ದಂಥ ಬಾರ್ ಅಂಡ್ ರೆಸ್ಟೋರೆಂಟ್‌ನ್ನು ಲೋಟೋಸ್ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ಈ ವೃತ್ತಕ್ಕೆ ಶಿಫ್ಟಿಂಗ್‌ನ್ನು ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮೇ 27ನೇ ತಾರಿಖಿಗೆ ಅಲ್ಲಿಯ ಅಬಕಾರಿ ಡಿ.ಸಿ.ಯವರ ಗಮನಕ್ಕೆ ವಿಚಾರವನ್ನು ತಂದು ಈ ಪ್ರದೇಶದ ಪೂರ್ತಿ ಜನಗಳ ವಿರೋಧ ಇದ್ದರೂ ಕೂಡ ತಗಡೂರು ರಾಮಚಂದ್ರರಾಯರ ಪ್ರತಿಮೆಯ ಮುಂದೆ ಇದು ಆಗಬಾರದು ಎಂಬ ವಿಚಾರವನ್ನು ಅವರ ಮುಂದಿಟ್ಟಾಗ ನಾವು ಯಾವುದೇ ಪರ್ಮಿಶನ್ ಕೊಟ್ಟಿಲ್ಲ, ತಾವುಗಳು ಶಾಸಕರಾಗಿ ಒಂದು ಪತ್ರವನ್ನು ಬರೆದುಕೊಡಿ ಎಂದು ಹೇಳಿದರು. 29ನೇ ತಾರೀಖಿಗೆ ಇದಕ್ಕೆ ಸಂಬಂಧಪಟ್ಟ ಹಾಗೆ ಅಬಕಾರಿ ಡಿಸಿ ಯವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಆದರೆ ನಾನು ಪತ್ರವನ್ನು ಬರೆಯುವುದಕ್ಕೆ ಮುಂಚೆ ಒಂದು ವಾರದ ಹಿಂದಿನ ಡೇಟ್ ಹಾಕಿ ಶಿಫ್ಟಿಂಗ್ ಮಾಡುವ ವ್ಯವಸ್ಥೆಯಾಗಿದೆ. ಶಿಫ್ಟಿಂಗ್‌ಗೆ ಅನುಮತಿ ಕೊಡುವಂಥ ಸಂದರ್ಭದಲ್ಲಿ ಕೂಗಬಾರದೆಂಬ ನನ್ನ ಮನವಿಯಿದ್ದರೂ ಕೂಡ ಎಲ್ಲರ ವಿರೋಧವಿದ್ದರೂ ಕೂಡ ಯಾರದ್ದೂ ವಿರೋಧವಿಲ್ಲದ ಕಾರಣ ಕೊಡಲಾಗಿದೆ ಎಂದು ಹೇಳಿ, ಅವರ ಆದೇಶದಲ್ಲಿ ಕೂಡ ಇದೆ. ಇನ್ನೊಂದು ಪ್ರಮುಖವಾಗಿ ಅಬಕಾರಿ ಆಕ್ಟ್‌ನಲ್ಲಿ ಲೋಕಲ್ ಬಾಡಿಯ ಎನ್‌ಓಸಿ ಯು ತುಂಬಾ ಅವಶ್ಯಕವಾಗಿರುತ್ತದೆ. ಆ ಎನ್‌ಓಸಿ ಕೂಡಲೇ ಬೇಕಾದಂಥ ಒಂದು ಪರಿಸ್ಥಿತಿಯು ಬಂದಾಗ ಏನ್‌ಓಸಿಯನ್ನು ಫೇಕ್ ಎನ್‌ಓಸಿಯನ್ನು ಫೋರ್ಜ್ ಮಾಡಿ ಕೊಟ್ಟು ಶಿಫ್ಟ್ ಮಾಡುವಂಥ ಕೆಲಸವನ್ನು ಮಾಡಲಾಗಿದೆ. ನಾನು ಇದಕ್ಕೆ ಸಂಬಂಧಪಟ್ಟ ಹಾಗೆ 20-6-02 ರಲ್ಲಿ ನಗರ ಪಾಲಿಕೆಯ ಆಯುಕ್ತರಿಗೆ ಒಂದು ಪತ್ರವನ್ನು ಬರೆದಿದ್ದೆ. ಆ ಪತ್ರಕ್ಕೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಪತ್ರದ ಸಂಖ್ಯೆ: ಹೆಚ್.-3, ಪಿಆರ್: ಎನ್‌ಸಿ 1262,-2-3, ಇದರ ಪ್ರಕಾರದಲ್ಲಿ ನಾವು ಯಾವುದೇ ಎನ್‌ಓಸಿ ಯನ್ನು ಕೊಟ್ಟಿಲ್ಲ. ತಮಗೆ ಎನ್‌ಓಸಿ ಬೇಕೆಂದು ಅರ್ಜಿಯೂ ಕೂಡ ನಮ್ಮಲ್ಲಿ ಬಂದಿಲ್ಲ. ಹಾಗೆಯೇ ಇದಕ್ಕೆ ಸಂಬಂಧ ಪಟ್ಟಂಥ ಯಾವುದೇ ಕಡತಗಳು ನಗರಪಾಲಿಕೆಯಲ್ಲಿಲ್ಲ. ಇನ್ನೊಂದು ವಿಚಾರ ಅಂದರೆ, ಶಿಫ್ಟಿಂಗ್‌ಗೆ ಬೇಕಾಗಿರುವಂಥ ನಗರ ಪಾಲಿಕೆಗೆ ಕಟ್ಟ ಬೇಕಾದಂಥ 4300 ರೂಪಾಯಿಗಳನ್ನು ನಗರಪಾಲಿಕೆಗೆ ಕಟ್ಟಿಲ್ಲ. ಯಾವುದೇ ಅಂಥ ಚಲನ್ ಇಲ್ಲಿ ಇಲ್ಲ ಎಂದು ನಗರಪಾಲಿಕೆ ನನಗೆ ಎಂಡಾರ್ಸ್‌ಮೆಂಟ್‌ನ್ನು ಕೊಟ್ಟಿದ್ದನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಅದರ ಹಿಂದಿನ ಏಕೈಸ್ ಡಿ.ಸಿ. ಈ